

بسم اللهِ الرّحمٰن الرّحيم

# ಹಝ್ರತ್ ಅಲಿ(ರ)

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **04-12-2020** ರಂದು ನೀಡಿದ **ಜುಮುಅ ಖುತ್‌ಬದ** ಸಾರಾಂಶ)

أَشْهَدُ أَنْ لَا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

(ತಶಹ್ಹುದ್, ತಅವ್ವುಝ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ *ಹೀಗೆ ಹೇಳಿದರು:*

ಕಳೆದ ಖುತ್‌ಬದಲ್ಲಿ ಹಝ್ರತ್ ಅಲಿಯರ(ರ) ಬಗ್ಗೆ ಪ್ರಸ್ತಾಪಿಸಲಾಗಿತ್ತು. ಇಂದು ಸಹ ಅದಕ್ಕೆ ಸಂಬಂಧಿಸಿ ಪ್ರಸ್ತಾಪಿಸುವೆನು. ಹಝ್ರತ್ ಪೈಗಂಬರ್(ಸ) ಎರಡು ಸಲ ಹಝ್ರತ್ ಅಲಿ(ರ)ರನ್ನು ತನ್ನ ಸಹೋದರನೆಂದು ಕರೆದದ್ದಾಗಿ ವರದಿಯಾಗಿದೆ. ಒಂದು ಬಾರಿ ಹಝ್ರತ್ ಪೈಗಂಬರ್(ಸ) ಮುಹಾಜಿರರ ನಡುವೆ ಮಕ್ಕದಲ್ಲಿ ಸಾಹೋದರ್ಯ ಸಂಬಂಧವನ್ನು ಸ್ಥಾಪಿಸಿದ್ದರು. ಮತ್ತೊಂದು ಸಲ ಮುಹಾಜಿರರ ಮತ್ತು ಅನ್ಸಾರರ ಮಧ್ಯೆ ಮದೀನದಲ್ಲಿ ಹಿಜ್ರತ್ ನಂತರ ಸಾಹೋದರ್ಯ ಸಂಬಂಧವನ್ನು ಸ್ಥಾಪಿಸಿದ್ದರು. ಈ ಎರಡು ಸಂದರ್ಭದಲ್ಲೂ ಹಝ್ರತ್ ಅಲಿ(ರ)ರೊಡನೆ ಹಝ್ರತ್ ಪೈಗಂಬರ್(ಸ) ಹೇಳಿದರು: **ಅಂತ ಅಖೀ ಫಿದ್ದುನ್‌ಯಾ ವಲ್‌ಆಖಿರ.** ನೀನು ಇಹಲೋಕದಲ್ಲೂ ಪರಲೋಕದಲ್ಲೂ ನನ್ನ ಸಹೋದರನಾಗಿರುವಿ.

ಹಝ್ರತ್ ಅಲಿ(ರ) ತಬೂಕ್ ಯುದ್ಧ ಹೊರತುಪಡಿಸಿ, ಬದ್ರ್ ಯುದ್ಧ ಸಮೇತ ಬಾಕಿಯೆಲ್ಲ ಯುದ್ಧಗಳಲ್ಲಿ ಭಾಗಿಯಾಗಿದ್ದರು. ತಬೂಕ್ ಯುದ್ಧ ವೇಳೆಯಲ್ಲಿ ಹಝ್ರತ್ ಪೈಗಂಬರ್(ಸ) ಅವರನ್ನು ಕುಟುಂಬದವರ ಮೇಲ್ನೋಟ ವಹಿಸಲು ನಿಶ್ಚಯಿಸಿದ್ದರು.

ಹಝ್ರತ್ ಸಅಲಬ ಬಿನ್ ಅಬೂ ಮಾಲಿಕ್ ವರದಿ ಮಾಡುತ್ತಾರೆ: ಹಝ್ರತ್ ಸಅದ್ ಬಿನ್ ಉಬಾದ ಎಲ್ಲ ಸಂದರ್ಭದಲ್ಲೂ ಹಝ್ರತ್ ಪೈಗಂಬರ್(ಸ)ರ ವತಿಯಿಂದ ಧ್ವಜವಾಹಕರಾಗಿದ್ದರು. ಆದರೆ ಯುದ್ಧದ ಸಮಯವಾಗುವಾಗ ಹಝ್ರತ್ ಅಲಿ ಬಿನ್ ಅಬೂತಾಲಿಬ್(ರ) ಧ್ವಜವನ್ನು ಪಡೆಯುತ್ತಿದ್ದರು.

ಉಶೈರ ಯುದ್ಧವು ಜಮಾದಿಲ್ ಊಲ ಹಿಜರೀ ಎರಡರಲ್ಲಿ ನಡೆದಿತ್ತು. ಹಝ್ರತ್ ಅಮ್ಮಾರ್ ಬಿನ್ ಯಾಸಿರ್ ವರದಿ ಮಾಡುತ್ತಾರೆ: ಉಶೈರ್ ಯುದ್ಧದಲ್ಲಿ ಹಝ್ರತ್ ಅಲಿ(ರ) ನನ್ನ ಸಹಪ್ರಯಾಣಿಕರಾಗಿದ್ದರು. ಆ ದಿನದಂದು ಹಝ್ರತ್ ಅಲಿಯರ ದೇಹದ ಮೇಲಿದ್ದ ಮಣ್ಣನ್ನು ನೋಡಿಕೊಂಡು ಹಝ್ರತ್ ಪೈಗಂಬರ್(ಸ) ಹೇ ಅಬೂ ತುರಾಬ್ ಎಂದು ಹೇಳಿದರು. ಅನಂತರ ಹೇಳಿದರು: ಅತ್ಯಂತ ನತದೃಷ್ಟರಾದ ಇಬ್ಬರು ವ್ಯಕ್ತಿಗಳ ಬಗ್ಗೆ ನಿಮ್ಮೊಡನೆ ಹೇಳಲೇ? ಹೇಳಿರಿ ಯಾ ರಸೂಲಲ್ಲಾಹ್ ಎಂದು ನಾವು ಹೇಳಿದೆವು. ಹಝ್ರತ್ ಪೈಗಂಬರ್(ಸ) ಹೇಳಿದರು: ಮೊದಲ ವ್ಯಕ್ತಿ, ಹಝ್ರತ್ ಸಾಲಿಹ್ ಅಲೈಹಿಸ್ಸಲಾಮರ ಒಂಟೆಯ ಕಾಲುಗಳನ್ನು ಮುರಿದಿದ್ದ ಸಮೂದ್ ಸಮುದಾಯದ ಒಹೈಮರ್ ಆಗಿದ್ದನು. ಎರಡನೇ ವ್ಯಕ್ತಿ, ಹೇ ಅಲಿ, ನಿನ್ನ ತಲೆ ಮೇಲೆ ಹಲ್ಲೆ ನಡೆಸಲಿರುವ ವ್ಯಕ್ತಿಯಾಗಿರುವನು. ಆಗ ನಿನ್ನ ಈ ಗಡ್ಡ ರಕ್ತದಿಂದ ಒದ್ದೆಯಾಗುವುದು.

ಹಿಜರೀ 2ರಲ್ಲಿ, ಎಂದರೆ ಕ್ರಿಸ್ತಶಕ 623ರಲ್ಲಿ ಬದ್ರ್ ಯುದ್ಧ ನಡೆದಿತ್ತು. ಬದ್ರ್ ಯುದ್ಧದ ಸಂದರ್ಭದಲ್ಲಿ, ಉಭಯ ಸೈನ್ಯ ಮುಖಾಮುಖಿಯಾದಾಗ, ಮೊತ್ತಮೊದಲು ರಬೀಅ್‌ರ ಇಬ್ಬರು ಮಕ್ಕಳಾದ ಶೈಬ ಮತ್ತು ಉತ್‌ಬ ಹಾಗೂ ವಲೀದ್ ಬಿನ್ ಉತ್‌ಬ ಮುಂದಕ್ಕೆ ಧಾವಿಸಿಕೊಂಡು ಯುದ್ಧಕ್ಕಾಗಿ ಆಹ್ವಾನಿಸಿದಾಗ, ಬನೂ ಹಾರಿಸ್ ಗೋತ್ರದ ಅನ್ಸಾರರಾದ ಅಫ್‌ರಾಅ್‌ರ ಮೂರು ಮಕ್ಕಳಾದ ಮಆಝ್, ಮುಅವ್ವಿಝ್ ಮತ್ತು ಔಫ್ ಹೋರಾಡಲು ಮುಂದಕ್ಕೆ ಧಾವಿಸಿದರು. ಆದರೆ ಹಝ್ರತ್ ಪೈಗಂಬರ್(ಸ) ಅವರನ್ನು ಮರಳಿ ಕರೆದರು. ಹಝ್ರತ್ ಪೈಗಂಬರ್(ಸ) ಹೇಳಿದರು: **"**ಹೇ ಹಾಶಿಮಿನ ಕುಟುಂಬದವರೇ, ನಿಮ್ಮ ಹಕ್ಕಿಗಾಗಿ ಹೋರಾಡಿರಿ. ಅದಕ್ಕಾಗಿ ಅಲ್ಲಾಹನು ನಿಮ್ಮ ಪ್ರವಾದಿಯನ್ನು ನಿಯೋಜಿಸಿದ್ದಾನೆ.**"** ಆಗ ಹಝ್ರತ್ ಹಂಝ(ರ), ಹಝ್ರತ್ ಅಲಿ(ರ) ಮತ್ತು ಹಝ್ರತ್ ಉಬೈದ(ರ) ಎದ್ದು ಅವರ ಕಡೆಗೆ ಧಾವಿಸಿದರು. ಆಗ ಅತ್‌ಬ ತನ್ನ ಮಗನೊಡನೆ ಹೇಳಿದನು: ಹೇ ವಲೀದ್ ಏಳು. ಹೀಗೆ ಹಝ್ರತ್ ಅಲಿ(ರ) ಅವರೊಡನೆ ಸೆಣಸಾಡಲು ಹೊರಟರು. ಅವರಿಬ್ಬರು ಪರಸ್ಪರ ಖಡ್ಗಗಳನ್ನು ಚಲಾಯಿಸಿದರು. ಹಝ್ರತ್ ಅಲಿ(ರ) ವಲೀದ್‌ನನ್ನು ಕೊಂದರು. ಅನಂತರ ಉತ್‌ಬ ನಿಂತನು. ಹಝ್ರತ್ ಹಂಝ(ರ) ಅವನನ್ನು ಕೊಂದರು. ಅನಂತರ ಶೈಬ ನಿಂತನು. ಅವನೊಡನೆ ಹೋರಾಡಲು ಹಿರಿವಯಸ್ಸಿನ ಹಝ್ರತ್ ಉಬೈದ(ರ) ಧಾವಿಸಿದರು. ಹಝ್ರತ್ ಉಬೈದರ ಕಾಲಿನ ಮೇಲೆ ಖಡ್ಗದ ತುದಿಯಿಂದ ಶೈಬ ಹಲ್ಲೆ ನಡೆಸಿದನು. ಅದು ಹಝ್ರತ್ ಉಬೈದರ ಮೊಣಕಾಲಿನ ಮಾಂಸಕ್ಕೆ ತಗುಲಿತು ಮತ್ತು ಅದನ್ನು ಹರಿದು ಹಾಕಿತು. ಆಗ ಹಝ್ರತ್ ಹಂಝ(ರ) ಮತ್ತು ಹಝ್ರತ್ ಅಲಿ(ರ) ಮುಂದಕ್ಕೆ ಧಾವಿಸಿಕೊಂಡು ಶೈಬನ ಮೇಲೆ ಹಲ್ಲೆ ನಡೆಸಿ ಅವನನ್ನು ಕೊಂದುಹಾಕಿದರು.

ಹಝ್ರತ್ ಅಲಿ(ರ) ವರದಿ ಮಾಡುತ್ತಾರೆ: ಬದ್ರ್ ಯುದ್ಧದ ಸಂದರ್ಭದಲ್ಲಿ, ನನ್ನ ಮತ್ತು ಹಝ್ರತ್ ಅಬೂಬಕರ್(ರ)ರ ಬಗ್ಗೆ ಹಝ್ರತ್ ಪೈಗಂಬರ್(ಸ) ಹೇಳಿದರು: ನಿಮ್ಮಿಬ್ಬರಲ್ಲಿ ಒಬ್ಬರ ಬಲಗಡೆ ಶ್ರೇಷ್ಠ ದೇವದೂತರಾದ ಹಝ್ರತ್ ಜಿಬ್ರೀಲ್ ಮತ್ತು ಮತ್ತೊಬ್ಬರ ಬಲಗಡೆ ಹಝ್ರತ್ ಮೀಕಾಈಲ್ ಮತ್ತು ಹಝ್ರತ್ ಇಸ್ರಾಫೀಲ್ ಇರುವರು. ಅವರು ಯುದ್ಧ ವೇಳೆಗಳಲ್ಲಿ ಹಾಜರಾಗುತ್ತಾರೆ ಮತ್ತು ಯುದ್ಧಪಂಕ್ತಿಯಲ್ಲಿ ಇರುತ್ತಾರೆ.

ಹಿಜರೀ 2ರಲ್ಲಿ ಹಝ್ರತ್ ಫಾತಿಮರೊಡನೆ ಹಝ್ರತ್ ಅಲಿಯವರ ವಿವಾಹ ನಡೆಯಿತು. ಹಝ್ರತ್ ಫಾತಿಮಾರನ್ನು

ತನಗೆ ನಿಕಾಹ್ ಮಾಡಿಸಿಕೊಡಲು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಡನೆ ಹಝ್ರತ್ ಅಲಿ(ರ) ವಿನಂತಿಸಿದ್ದರು. ಹಝ್ರತ್ ಪೈಗಂಬರ್(ಸ) ಸಂತೋಷದಿಂದ ಅದನ್ನು ಅಂಗೀಕರಿಸಿದರು ಮತ್ತು ಮಹರ್ ಆಗಿ ಕೊಡಲು ಏನಾದರೂ ಇದೆಯೇ ಎಂದು ಹಝ್ರತ್ ಪೈಗಂಬರ್(ಸ) ಕೇಳಿದರು. ನನ್ನ ಕುದುರೆ ಮತ್ತು ಯುದ್ಧ ಕವಚವಿದೆ ಎಂದು ಹಝ್ರತ್ ಅಲಿ(ರ) ಹೇಳಿದರು. ರಕ್ಷಾಕವಚವನ್ನು ಮಾರಾಟ ಮಾಡಲು ಹಝ್ರತ್ ಪೈಗಂಬರ್(ಸ) ಹೇಳಿದರು. ಹೀಗೆ ಅವರು ತನ್ನ ರಕ್ಷಾ ಕವಚವನ್ನು ನಾನ್ನೂರ ಎಂಬತ್ತು ದಿರ್‌ಹಮಿಗೆ ಮಾರಾಟ ಮಾಡಿ ಮಹರಿನ ವ್ಯವಸ್ಥೆಯನ್ನು ಮಾಡಿದರು.

(ಹುಝೂರ್ ಹೇಳಿದರು:) ಹಕ್ ಮಹರ್ ಮತ್ತೆ ಕೊಟ್ಟರಾಯಿತು, ನೋಡೋಣ ಎಂದು ಜನರು ಹೇಳುವುದಿದೆ. ಆದರೆ ಹಕ್ ಮಹರಿಗಾಗಿ ಬೇಕಾಗಿರುವ ವ್ಯವಸ್ಥೆಯನ್ನು ಮೊದಲು ಮಾಡು ಎಂದು ಹಝ್ರತ್ ಪೈಗಂಬರ್(ಸ) ಹೇಳಿದ್ದರು. ಇದು ಕೂಡಲೇ ಸಿಗಬೇಕಾದ ಹಕ್ಕೆಂದು ಇದರಿಂದ ಗೊತ್ತಾಗುತ್ತದೆ. ನಾವು ಸಂತೋಷದಿಂದ ಇರುವೆವಾದರೂ ಸ್ತ್ರೀಯರು ಹಕ್ ಮಹರ್ ಬೇಡುತ್ತಿರುತ್ತಾರೆ ಎಂದು ಕೆಲವರು ನನಗೆ ಪತ್ರ ಬರೆಯುತ್ತಾರೆ. ಅದು ಅವರ ಹಕ್ಕಾದ ಕಾರಣದಿಂದ ಅವರು ಅದನ್ನು ಬೇಡುತ್ತಿರುವರು. ಅದನ್ನು ಆಗಲೇ ಕೊಡಬೇಕಾಗಿದೆ.

ಹಝ್ರತ್ ಫಾತಿಮರನ್ನು ಬೀಳ್ಕೊಟ್ಟ ನಂತರ ಹಝ್ರತ್ ಅಲಿಯೊಡನೆ ಹಝ್ರತ್ ಪೈಗಂಬರ್(ಸ) ಹೇಳಿದರು: ಫಾತಿಮ ನಿನ್ನ ಬಳಿಗೆ ಬಂದ ನಂತರ, ನಾನು ಬರುವ ವರೆಗೆ ಯಾವುದೇ ಮಾತನ್ನಾಡಬೇಡ. ಅನಂತರ ಹಝ್ರತ್ ಪೈಗಂಬರ್(ಸ) ಅಲ್ಲಿಗೆ ಹೋಗಿ ಫಾತಿಮರೊಡನೆ ನೀರು ತರಲು ಹೇಳಿದರು. ಅವರು ನೀರನ್ನು ತಂದಾಗ, ಅವರು ಅದನ್ನು ತೆಗೆದುಕೊಂಡು. ಅದರಿಂದ ಬಾಯಿ ಮುಕ್ಕಳಿಸಿದರು. ಅನಂತರ ಹಝ್ರತ್ ಫಾತಿಮಾರ ತಲೆಗೆ ಸ್ವಲ್ಪ ನೀರನ್ನು ಚೆಲ್ಲಿದರು ಮತ್ತು ಹೀಗೆ ದುಆ ಮಾಡಿದರು: ಹೇ ಅಲ್ಲಾಹ್, ಇವಳನ್ನು ಮತ್ತು ಇವಳ ಮಕ್ಕಳನ್ನು ಶಪಿಸಲ್ಪಟ್ಟ ಶೈತಾನನಿಂದ ಸಂರಕ್ಷಿಸು. ಅನಂತರ ಹಝ್ರತ್ ಪೈಗಂಬರ್(ಸ) ಅವರೊಡನೆ ತಿರುಗಿ ನಿಲ್ಲಲು ಹೇಳಿದರು. ಅವರು ತಿರುಗಿದಾಗ, ಹಝ್ರತ್ ಪೈಗಂಬರ್(ಸ) ಅವರ ಬುಜಗಳ ನಡುವೆ ನೀರನ್ನು ಚೆಲ್ಲಿದರು. ಹೀಗೆಯೇ ಹಝ್ರತ್ ಅಲಿಯೊಡನೆ ಸಹ ಮಾಡಿದರು.

ಹಝ್ರತ್ ಪೈಗಂಬರ್(ಸ)ರಿಗೆ ಹಝ್ರತ್ ಖದೀಜರಲ್ಲಿ ಜನಿಸಿದ ಮಕ್ಕಳಲ್ಲಿ ಹಝ್ರತ್ ಫಾತಿಮಾ(ರ) ಎಲ್ಲರಿಗಿಂತ ಕಿರಿಯರಾಗಿದ್ದರು. ಹಝ್ರತ್ ಪೈಗಂಬರ್(ಸ)ರಿಗೆ ತನ್ನ ಮಕ್ಕಳಲ್ಲಿ ಹಝ್ರತ್ ಫಾತಿಮ(ರ) ಹೆಚ್ಚು ಪ್ರಿಯರಾಗಿದ್ದರು.

ಹಝ್ರತ್ ಅಲಿ ಮತ್ತು ಹಝ್ರತ್ ಫಾತಿಮಾ ಬಡತನದಲ್ಲಿದ್ದರೂ ಇದ್ದುದರಲ್ಲಿ ತೃಪ್ತಿ ಹೊಂದುವ ಕಾರ್ಯದಲ್ಲಿ ಮಾದರಿಯಾಗಿದ್ದರು. ಹಝ್ರತ್ ಅಲಿ(ರ) ವರದಿ ಮಾಡುತ್ತಾರೆ: ಬೀಸುವ ಕಲ್ಲನ್ನು ಉಪಯೋಗಿಸಿತ್ತಿರುವ ಕಾರಣದಿಂದ ಕೈ ನೋವಾಗುತ್ತಿರುವುದರ ಬಗ್ಗೆ ಒಮ್ಮೆ ಹಝ್ರತ್ ಫಾತಿಮಾ(ರ) ದೂರಿದರು. ಹಝ್ರತ್ ಪೈಗಂಬರ್(ಸ)ರ ಬಳಿಗೆ ಕೆಲವು ಯುದ್ಧ ಕೈದಿಗಳನ್ನು ತರಲಾಗಿತ್ತು. ಆಗ ಹಝ್ರತ್ ಪೈಗಂಬರ್(ಸ)ರ ಮನೆಗೆ ಹಝ್ರತ್ ಫಾತಿಮ ಹೋದರು. ಆದರೆ ಪೈಗಂಬರ್(ಸ) ಅಲ್ಲಿರಲಿಲ್ಲ. ಹಝ್ರತ್ ಆಯಿಶರೊಡನೆ ಹಝ್ರತ್ ಫಾತಿಮ ತಾನು ಬಂದಿದ್ದ ಉದ್ದೇಶವನ್ನು ಹೇಳಿದರು. ಹಝ್ರತ್ ಪೈಗಂಬರ್(ಸ) ಮನೆಗೆ ಬಂದಾಗ, ಹಝ್ರತ್ ಫಾತಿಮ(ರ) ಮನೆಗೆ ಬಂದಿದ್ದ ವಿವರವನ್ನು ಹಝ್ರತ್ ಆಯಿಶ(ರ) ಹೇಳಿಕೊಟ್ಟರು. ಹಝ್ರತ್ ಅಲಿ(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ನಮ್ಮ ಬಳಿಗೆ ಬಂದರು. ಆಗ ನಾವು ಮಲಗಿದ್ದೆವು. ನಾವು ಎದ್ದು ನಿಲ್ಲಲು ತಯಾರಾದಾಗ, ತಮ್ಮ ಜಾಗಗಳಲ್ಲೇ ಇರಲು ಹಝ್ರತ್ ಪೈಗಂಬರ್(ಸ) ಹೇಳಿದರು. ಅನಂತರ ಹಝ್ರತ್ ಪೈಗಂಬರ್(ಸ) ನಮ್ಮ ಮಧ್ಯೆ ಕುಳಿತುಕೊಂಡರು. ಅನಂತರ ಹೇಳಿದರು: ನೀವು ಕೇಳಿದ್ದಕ್ಕಿಂತ ಉತ್ತಮವಾದುದನ್ನು ನಾನು ನಿಮಗೆ ಹೇಳಿಕೊಡಲೇ? ಅದೇನೆಂದರೆ, ನೀವು ರಾತ್ರಿ ಮಲಗುವಾಗ, 34 ಸಲ ಅಲ್ಲಾಹು ಅಕ್ಬರ್, 33 ಬಾರಿ ಸುಬ್‌ಹಾನಲ್ಲಾಹ್, 33 ಸಲ ಅಲ್‌ಹಮ್ದುಲಿಲ್ಲಾಹ್ ಎಂದು ಹೇಳಿರಿ. ಇದು ನಿಮ್ಮಿಬ್ಬರಿಗೂ ಕೆಲಸಕ್ಕಾಗಿ ಸೇವಕನು ಲಭಿಸುವುದಕ್ಕಿಂತ ಉತ್ತಮವಾಗಿದೆ.

ಹಝ್ರತ್ ಮುಸ್ಲಿಹ್ ಮೌಊದ್(ರ) ಈ ಘಟನೆಯ ಬಗ್ಗೆ ಬರೆಯುತ್ತಾರೆ: ಹಝ್ರತ್ ಪೈಗಂಬರ್(ಸ) ಬಯಸುವರಾದರೆ, ಹಝ್ರತ್ ಫಾತಿಮರಿಗೆ ಸೇವಕನನ್ನು ಒದಗಿಸಿ ಕೊಡಬಹುದಾಗಿತ್ತು. ಏಕೆಂದರೆ, ವಿತರಣೆಗಾಗಿ ಹಝ್ರತ್ ಪೈಗಂಬರರ ಬಳಿಗೆ ತರಲಾಗುತ್ತಿದ್ದ ಸಂಪತ್ತುಗಳನ್ನು ಸಹಾಬಿಯರಿಗೆ ವಿತರಣೆ ಮಾಡಲಿಕ್ಕಾಗಿಯೇ ತರಲಾಗುತ್ತಿತ್ತು. ಹಝ್ರತ್ ಅಲಿಗೂ ಇದರಲ್ಲಿ ಹಕ್ಕಿರಬಹುದು. ಹಝ್ರತ್ ಫಾತಿಮ(ರ) ಸಹ ಇದರ ಹಕ್ಕುದಾರರಾಗಿದ್ದರು. ಆದರೆ ಹಝ್ರತ್ ಪೈಗಂಬರ್(ಸ) ಜಾಗ್ರತೆ ವಹಿಸಿದರು. ಈ ಸಂಪತ್ತುಗಳನ್ನು ತನ್ನ ಆಪ್ತರಿಗೂ ಸಂಬಂಧಿಕರಿಗೂ ಕೊಡಲು ಇಷ್ಟಪಡಲಿಲ್ಲ. ಏಕೆಂದರೆ, ನಂತರದ ಕಾಲದಲ್ಲಿ, ಜನರು ಇದನ್ನು ಬೇರೆ ರೀತಿಯಲ್ಲಿ ಅರ್ಥ ಮಾಡಿಕೊಳ್ಳಲು ಸಾಧ್ಯತೆಯಿತ್ತು. ಜನಸಾಮಾನ್ಯರ ಸಂಪತ್ತನ್ನು ಉಪಯೋಗಿಸುವುದು ಸರಿಯೆಂದು ಅರಸರು ಭಾವಿಸುವರು. ಏನು, ಬೈತುಲ್ ಮಾಲಿನ ಇಂತಹ ಸಂರಕ್ಷಕರಾದ ಯಾವನಾದರೂ ಅರಸನನ್ನು ತೋರಿಸಲು ಯಾರಿಗಾದರೂ ಸಾಧ್ಯವಿದೆಯೇ?

ಹಝ್ರತ್ ಅಲಿ ಬಿನ್ ಅಬೂತಾಲಿಬ್(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಒಂದು ರಾತ್ರಿ ನನ್ನ ಮತ್ತು ಹಝ್ರತ್ ಪೈಗಂಬರರ ಪುತ್ರಿಯಾದ ಹಝ್ರತ್ ಫಾತಿಮರ ಬಳಿಗೆ ಬಂದರು. ನೀವು (ತಹಜ್ಜುದ್) ನಮಾಝ್ ನಿರ್ವಹಿಸುವುದಿಲ್ಲವೇ ಎಂದು ಹಝ್ರತ್ ಪೈಗಂಬರ್(ಸ) ಕೇಳಿದರು. ಆಗ ನಾನು ಹೇಳಿದೆ: ಯಾ ರಸೂಲಲ್ಲಾಹ್, ನಮ್ಮ ಜೀವ ಅಲ್ಲಾಹನ ಕೈಯಲ್ಲಿ ಇದೆ. ಅವನು ಎಬ್ಬಿಸಲು ಬಯಸುವಾಗ ನಾವು ನಿದ್ದೆಯಿಂದ ಎಚ್ಚರಗೊಳ್ಳುವೆವು. ಆಗ ಹಝ್ರತ್ ಪೈಗಂಬರ್(ಸ) ಇದಕ್ಕೆ ಉತ್ತರವೇನೂ ನೀಡದೆ ಮರಳಿ ಹೋದರು. ಹೋಗುವಾಗ ಹಝ್ರತ್ ಪೈಗಂಬರ್(ಸ) ತನ್ನ ತೊಡೆಗೆ ಕೈಯಿಂದ ಹೊಡೆಯುತ್ತಾ ಹೀಗೆ ಹೇಳುತ್ತಿದ್ದರು: **ವಕಾನಲ್ ಇನ್ಸಾನು ಅಕ್ಸರ ಶೈಇನ್ ಜದಲ**. ಎಂದರೆ, ಮನುಷ್ಯನಾದರೋ ಅತ್ಯಂತ ಜಗಳಗಂಟಿಯಾಗಿದ್ದಾನೆ. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಇದು ಪವಿತ್ರ ಖುರ್‌ಆನಿನ ಒಂದು ವಚನವಾಗಿದೆ. ಇದರ ತಾತ್ಪರ್ಯವೇನೆಂದರೆ, ಮನುಷ್ಯನು

ಹೆಚ್ಚಾಗಿ ತನ್ನ ತಪ್ಪುಗಳನ್ನು ಸಮ್ಮತಿಸಲು ತಯಾರಾಗುವುದಿಲ್ಲ. ಹಲವು ರೀತಿಯಲ್ಲಿ ವಾದಿಸಿಕೊಂಡು ತನ್ನ ತಪ್ಪುಗಳನ್ನು ಮರೆಮಾಚುತ್ತಾನೆ. ಹಝ್ರತ್ ಪೈಗಂಬರ್(ಸ) ಕೋಪಗೊಳ್ಳುವುದಕ್ಕೆ ಬದಲಾಗಿ, ಅತಿ ಸೂಕ್ಷ್ಮವಾದ ಒಂದು ರೀತಿಯನ್ನು ಕೈಗೊಂಡರು. ಹಝ್ರತ್ ಅಲಿ(ರ) ತನ್ನ ಜೀವಿತದ ಕೊನೆಯ ದಿನಗಳ ತನಕ ಇದರ ಮಾಧುರ್ಯವನ್ನು ಸವಿದಿರಬಹುದು. ಈ ಹದೀಸಿನಿಂದ ಹಲವು ಕಾರ್ಯಗಳು ನಮಗೆ ತಿಳಿದುಬರುತ್ತವೆ. ಇದು ಹಝ್ರತ್ ಪೈಗಂಬರರ ಸ್ವಭಾವವೈಶಿಷ್ಟ್ಯಗಳ ವಿವಿಧ ಮಜಲುಗಳ ಮೇಲೆ ಬೆಳಕುಬೀರುತ್ತದೆ. ಮೊದನೆಯದಾಗಿ, ಹಝ್ರತ್ ಪೈಗಂಬರರಿಗೆ ಧಾರ್ಮಿಕತೆಯ ಬಗ್ಗೆ ಎಷ್ಟು ಗಮನವಿತ್ತು ಎಂದು ಗೊತ್ತಾಗುತ್ತದೆ. ರಾತ್ರಿ ಸಮಯದಲ್ಲಿ ಹೋಗಿ ತನ್ನ ಆಪ್ತರ ಬಗ್ಗೆ ಕಾಳಜಿ ವಹಿಸುತ್ತಿದ್ದರು. ಎರಡನೆಯದಾಗಿ, ರಾತ್ರಿ ಸಮಯದಲ್ಲಿ, ತನ್ನ ಮಗಳೊಡನೆ ಮತ್ತು ಅಳಿಯನೊಡನೆ ತಹಜ್ಜುದ್ ನಿರ್ವಹಿಸಲು ಉಪದೇಶಿಸುತ್ತಾರೆ. ಹಝ್ರತ್ ಪೈಗಂಬರ್(ಸ)ರಿಗೆ ದೃಢವಾದ ವಿಶ್ವಾಸವಿದ್ದ ಅಧ್ಯಾಪನೆಯ ಪ್ರಕಾರ ಜನರನ್ನು ನಡೆಸಲು ಬಯಸುತ್ತಿದ್ದರು. ಮೂರನೇ ಸಂಗತಿಯೇನೆಂದರೆ, ಪ್ರತಿಯೊಂದು ಸಂಗತಿಯನ್ನು ಇತರರಿಗೆ ಮನವರಿಕೆ ಮಾಡಿಸಿಕೊಡುವ ವಿಷಯದಲ್ಲಿ ಹಝ್ರತ್ ಪೈಗಂಬರ್(ಸ) ಸಹನೆ ವಹಿಸುತ್ತಿದ್ದರು. ಕಲಹಿಸುವುದಕ್ಕೆ ಬದಲಾಗಿ, ಪ್ರೀತಿ ಮತ್ತು ಪ್ರೇಮದಿಂದ ಬೇರೆಯವರ ತಪ್ಪುಗಳ ಬಗ್ಗೆ ಹೇಳಿಕೊಡುತ್ತಿದ್ದರು. ಹಝ್ರತ್ ಅಲಿ(ಕರ್ರಮಲ್ಲಾಹು ವಜ್‌ಹಹು) ಹೇಳುತ್ತಾರೆ: ಅದರ ನಂತರ ನಾನು ಎಂದಿಗೂ ತಹಜ್ಜುದ್ ನಮಾಝ್ ನಿರ್ವಹಿಸದೇ ಇರಲಿಲ್ಲ. (ಹುಝೂರ್ ಹೇಳಿದರು:) ಇವರ ಪ್ರಸ್ತಾಪ ಇನ್ನೂ ಮುಂದುವರೆಯುವುದು. ಇನ್‌ಶಾಅಲ್ಲಾಹ್.

ಇತ್ತೀಚಿಗೆ ಪಾಕಿಸ್ತಾನದ ಸ್ಥಿತಿಗತಿಗಳು ಹೆಚ್ಚು ಕಠಿಣವಾಗುತ್ತಾ ಹೋಗುತ್ತಿವೆ. ಕೆಲವು ಅಧಿಕಾರಿಗಳು ಮೌಲವಿಯರ ಹಿಂದೆ ಹೋಗುತ್ತಾ ಅವರೊಂದಿಗೆ ಸೇರಿಕೊಂಡು ನಮಗೆ ಸಾಧ್ಯವಾದಷ್ಟು ನಷ್ಟಗಳನ್ನು ಉಂಟುಮಾಡಲು ಪ್ರಯತ್ನಿಸುತ್ತಿದ್ದಾರೆ. ಆದ್ದರಿಂದ ವಿಶೇಷವಾಗಿ ದುಆ ಮಾಡಿರಿ. ರಬ್‌ವದ ಅಹ್ಮದಿಯರನ್ನು ಮತ್ತು ಪಾಕಿಸ್ತಾನದ ಇತರ ಪಟ್ಟಣಗಳಲ್ಲಿ ನೆಲೆಸಿರುವ ಅಹ್ಮದಿಯರನ್ನು ಸಹ ಅಲ್ಲಾಹನು ತನ್ನ ಸಂರಕ್ಷಣೆಯಲ್ಲಿರಿಸಲಿ. ವಿರೋಧಿಗಳ ದುಷ್ಕೃತ್ಯಗಳಿಂದ ಸಂರಕ್ಷಿಸಲಿ. ವಿರೋಧಿಗಳ ಕುತಂತ್ರಗಳು ಅತಿ ಭಯಾನಕವೂ ಅಪಾಯಕರವೂ ಆದ ಕುತಂತ್ರಗಳಾಗಿವೆ. ಅವರ ಉಪದ್ರಗಳಿಂದ ಅಲ್ಲಾಹನು ಅಹ್ಮದಿಯರನ್ನು ಕಾಪಾಡಲಿ. ವಿರೋಧಿಗಳನ್ನು ಅಲ್ಲಾಹನು ಬೇಗನೇ ಹಿಡಿಗೂಡಲಿ – ಆಮೀನ್.

(ಖುತ್‌ಬದ ಕೊನೆಯಲ್ಲಿ ಹುಝೂರ್, ದಿವಂಗತ ಮುಕರ್ರಮ್ ಕಮಾಂಡರ್ ಚೌಧರಿ ಮುಹಮ್ಮದ್ ಅಸ್ಲಮ್ ಸಾಹಿಬ್, ಸನ್ಮಾನ್ಯ ಶಾಹೀನ ಖಮರ್ ಸಾಹಿಬ, ಮುಕರ್ರಮ್ ಸಮರ್ ಅಹ್ಮದ್ ಖಮರ್ ಸಾಹಿಬ್, ಸನ್ಮಾನ್ಯ ಸಈದ ಅಫ್‌ಝ್ಲುಲ್ ಖೋಖರ್ ಸಾಹಿಬ ಇವರ ಶ್ಲಾಘನೀಯವಾದ ಸ್ವಭಾವ ವೈಶಿಷ್ಟ್ಯಗಳನ್ನು ವಿವರಿಸಿದರು ಮತ್ತು ಜುಮಾ ನಮಾಝ್ ನಂತರ ಜನಾಝ ಗಾಇಬ್ ನಿರ್ವಹಿಸುವುದಾಗಿ ಹೇಳಿದರು.)

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَآءِ ذِي الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis(atba)***

*At, Masjid Mubarak, Islamabad, Tilford, UK, On 04-12-2020*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon